

# ತ್ವಾಹನ ಸಾರಥಿ!

■ ಮುಸ್ತಾಫ ಕೆ.ಎಚ್.

ಉಪ್ಪಾಪ ಸಾಯುವ ಮೊದಲು ಬಾಪನ ಪಾಲಿಗೆ ಮೂಲೆ ಅಂಗಡಿಯ ಹೋಟೆಲು ಮತ್ತು ಮಕ್ಕಂದೂರಿನಲ್ಲಿ ಎರಡು ಎಕರೆ ಭೂಮಿ ನೀಡಿದ್ದರು. ಕದ್ದ ಮರದ ನಾಟಾ ಖರೀದಿಸಿದ ಕಾರಣ ಮೂಲೆ ಅಂಗಡಿಯನ್ನು ಕುಟುಂಬ ಸಮೇತರಾಗಿ ತೊರೆಯಬೇಕಾದ ಸ್ಥಿತಿ ಬರಬಹುದೆಂದು ಬಾಪ ಕನಸು ಮನಸಿನಲ್ಲೂ ಅಂದುಕೊಂಡಿರಲಿಲ್ಲ. ಇದಾದ ಮೇಲೆ ಮಾದಾಪುರದಲ್ಲಿ ಆಡಿಯೊ ಕ್ಯಾಸೆಟ್ ಅಂಗಡಿ ಶುರುಮಾಡಿದ್ದರು. ಮೂರು ವರ್ಷಗಳಲ್ಲಿ ಸಾಲವೆಂಬ ಹೊನ್ನ ಶೂಲಕ್ಕೆ ಗುರಿಯಾಗಿ ಕ್ಯಾಸೆಟ್ ಅಂಗಡಿಯನ್ನೇ ಮಾರಬೇಕಾಗಿ ಬಂತು. ಜೀವನ ನಿರ್ವಹಣೆಗಾಗಿ ಎಸ್‌ಟಿಡಿ ಕಂ ಕೃಷ್ಣ ಹಾಲಿನ ಬೂತ್‌ನಲ್ಲಿ ಐವತ್ತು ರೂಪಾಯಿ ಸಂಬಳಕ್ಕೆ ಕೆಲಸ ಮಾಡುವಾಗ ಮಾಲೀಕನಾಗಿದ್ದವ ದಿನಗೂಲಿಗೆ ದುಡಿಯಬೇಕಾಗಿ ಬಂದ ಬಾಪನ ಬಗ್ಗೆ ಯೋಚಿಸುವಾಗ ಮನಸ್ಸು ಭಾರವೆನಿಸುತ್ತದೆ.

ಲಕ್ಷ ಮೀರಿ ನಿಂತಿದ್ದ ಸಾಲ ತೀರಿಸಬೇಕು. ಕುಟುಂಬದ ನೆಮ್ಮದಿಯ ನಾಳೆಗಳಿಗಾಗಿ ಏನನ್ನಾದರೂ ಮಾಡಬೇಕೆಂದುಕೊಳ್ಳುವಾಗ ಬಾಪನ ತಲೆಗೆ ಬಂದದ್ದೇ ಆಟೊ ಖರೀದಿಸುವ ಐಡಿಯಾ. ಇದ್ದ ಎರಡು ಎಕರೆ ಭೂಮಿ ಮಾರಿ ಬಂದ ಹಣದಲ್ಲಿ ಸಾಲ ತೀರಿಸಿ ಉಳಿದದ್ದರಲ್ಲಿ ಮೈಸೂರಿನಿಂದ ಹೊಸ ಟೂ ಸ್ಟ್ರೋಕ್ ಬಜಾಜ್ ಆಟೊ ಖರೀದಿಸಲಾಯಿತು. ಬಾಪನಿಗೆ ಸೈಕಲ್, ಬೈಕ್ ಬಿಟ್ಟರೆ ತ್ರಿಚಕ್ರ, ನಾಲ್ಕು ಚಕ್ರದ ವಾಹನ ಚಾಲನೆ ಬರುತ್ತಿರಲಿಲ್ಲ. ಒಂದು ವಾರಗಳ ಸತತ ಪ್ರಯತ್ನದಲ್ಲೇ ಬಾಪ ಆಟೊ ಚಲಾಯಿಸುವುದನ್ನು ಕಲಿತಾಗಿತ್ತು.

ರಮಜಾನ್ ತಿಂಗಳ ಮೊದಲ ಉಪವಾಸದ ಸುಬಹಿ ನಮಾಜಿನ ನಂತರ ಮಸೀದಿ ಮುಂಭಾಗ ಆಟೊ ನಿಲ್ಲಿಸಿ ಉಸ್ತಾದರಿಂದ ದುವಾ ಮಾಡಿಸಿ ರಸ್ತೆಗಿಳಿಸಲಾಯಿತು. ಪ್ರವಾದಿ ಮಹಮ್ಮದರಿಗಿದ್ದ ಇನ್ನೊಂದು ಹೆಸರು ತ್ವಾಹ ಎಂದು. ಅದನ್ನೇ ಆಟೊ ಮುಂಭಾಗದಲ್ಲಿ ಕೆಂಪು ಬಣ್ಣದ ದಪ್ಪ ಅಕ್ಷರದಲ್ಲಿ ಬರೆಸಲಾಯಿತು. ಹೆಚ್ಚಿನ ಆಟೊಗಳ ಮುಂಭಾಗದಲ್ಲಿ ಜೈ ಮಾರುತಿ, ಶ್ರೀ ಅಣ್ಣಮ್ಮ ದೇವಿ, ಸ್ವಾಮಿಯೇ ಶರಣಂ ಅಯ್ಯಪ್ಪ, ಗಾಡ್ ಇಸ್ ಗ್ರೇಟ್, ಗಾಡ್ ಗಿಫ್ಟ್, ಅಲ್ಲಲೋಯ, ಅಲ್ಲಾವು ಮಹಮ್ಮದ್, ಅಲ್ಲಾವು ಅಕ್ಬರ್, ಜೀಸಸ್ ಕ್ರೈಸ್ಟ್ ಎಂಬ ದೇವರ ಹೆಸರನ್ನೋ, ತಮ್ಮ ಮಕ್ಕಳ ಹೆಸರನ್ನೋ, ಆಟೊಶಂಕರ್, ಡಾ. ರಾಜ್, ಅಣ್ಣಾವ್ರು, ಸಾಹಸಸಿಂಹ, ಯಜಮಾನ, ಜೋಗಿ, ಪ್ರೀತ್ಸೆ, ಸಾರಥಿ, ಉಪೇಂದ್ರ, ಅಪ್ಪು, ಡಿ–ಬಾಸ್ ಎಂಬ ಸಿನಿಮಾ ನಟರ ಮತ್ತು ಸಿನಿಮಾದ ಹೆಸರನ್ನೋ ಬರೆಸುವುದು ವಾಡಿಕೆ.

ಬೆಂಗಳೂರಿನಂತಹ ಮಹಾನಗರದಿಂದ ಕೊಡಗಿನ ಕುಗ್ರಾಮದವರೆಗೂ ಆಟೊಗಳಲ್ಲಿ ಖ್ಯಾತ ನಟ ಶಂಕರ್‌ನಾಗ್ ಅವರ ಹೆಸರು ಮತ್ತು ಚಿತ್ರ ಹಾಕಿಸುವುದು ಕಡ್ಡಾಯವೆಂಬಂತೆ ಅವರ ಅಭಿಮಾನಿಗಳು ನಡೆದುಕೊಂಡು ಬರುತ್ತಿರುವುದು